

ಒಂದು ಆದರ್ಶ ಮದುವೆ

# ಅಭಿವ್ಯಕ್ತಿಯ ಹೆಜ್ಜೆ ಗುರುತು

■ ಎಲ್.ಎನ್. ಮುಕುಂದರಾಜ್

ಮೈಸೂರಿನಲ್ಲಿ 1984ರಲ್ಲಿ ಅಭಿವ್ಯಕ್ತಿ ಎಂಬ ಸಾಂಸ್ಕೃತಿಕ ವೇದಿಕೆ ಅಸ್ತಿತ್ವಕ್ಕೆ ಬಂತು. ಆ ಕಾಲದ ತರುಣ ಲೇಖಕ ನಾಗತಿಹಳ್ಳಿ ಚಂದ್ರಶೇಖರ ತಮ್ಮ ಕಥಾಸಂಕಲನವನ್ನು ಈ ವೇದಿಕೆಯ ಮೂಲಕ ಬಿಡುಗಡೆ ಮಾಡಿದ್ದರು. ಮರುವರ್ಷದಲ್ಲಿ ಇದೇ ವೇದಿಕೆಯಲ್ಲಿ ಅಂತರ್ಜಾತಿ ಮದುವೆಯನ್ನೂ ಮಾಡಿಕೊಂಡಿದ್ದರು. ಅಭಿವ್ಯಕ್ತಿಯ ಮುಂದಿನ ಕಾರ್ಯಯೋಜನೆಗಳಿಗೆ ಈ ಎರಡೂ ಕಾರ್ಯಕ್ರಮಗಳು ದಿಕ್ಸೂಚಿಯಂತಿದ್ದವು. ಅಲ್ಲಿಂದಾಚೆಗೆ ಈ ಸಾಂಸ್ಕೃತಿಕ ವೇದಿಕೆ 28 ವರ್ಷಗಳ ಕಾಲ ಅಸಂಖ್ಯಾತ ಕಾರ್ಯಕ್ರಮಗಳನ್ನು ರೂಪಿಸುತ್ತಾ ಬಂದಿದೆ. ಪುಸ್ತಕ ಪ್ರಕಟಣೆ, ವಿಚಾರಗೋಷ್ಠಿ, ಕವಿಗೋಷ್ಠಿ, ಸಂಸ್ಕೃತಿ ಚಿಂತನೆ, ಗ್ರಾಮ ಸಮಾಜದ ನಿರ್ಮಾಣ, ಸಿನಿಮಾ ಚಿಂತನೆ, ನಾಟಕ ಪ್ರದರ್ಶನ, ಪರಿಸರ ಹೋರಾಟ, ರೈತಪ್ರವಾಸ, ವೈದ್ಯಕೀಯ ಶಿಬಿರ ಇತ್ಯಾದಿಗಳನ್ನು ಏರ್ಪಡಿಸಿಕೊಂಡು ಬಂದಿದೆ.

ಅಭಿವ್ಯಕ್ತಿಯ ಕಾರ್ಯಕ್ರಮಗಳಲ್ಲಿ ಕನ್ನಡದ ಮೌಲಿಕ ಮನಸ್ಸುಗಳೆಲ್ಲ ಭಾಗವಹಿಸಿವೆ. ಶಿವರಾಮ ಕಾರಂತ, ಎ.ಎನ್.ಮೂರ್ತಿರಾವ್, ಲಂಕೇಶ್, ಏಣಗಿ ಬಾಳಪ್ಪ, ಅನಂತಮೂರ್ತಿ, ಚಂದ್ರಶೇಖರ ಕಂಬಾರ, ಜಿ.ಎಸ್.ಶಿವರುದ್ರಪ್ಪ, ಎಚ್.ಎಲ್.ನಾಗೇಗೌಡ, ಕಿ.ರಂ.ನಾಗರಾಜ, ಪಾಪು, ಎಂ.ಎಂ.ಕಲಬುರ್ಗಿ, ಕೆ.ಎಸ್.ಭಗವಾನ್, ಹಿ.ಶಿ.ರಾಮಚಂದ್ರೇಗೌಡ, ಸಿಜಿಕೆ, ಹಂಪನಾ, ಕಮಲಾ ಹಂಪನಾ, ಸಂತೋಷ ಹೆಗಡೆ, ಡಿ.ಕೆ.ಚೌಟ, ಡಾ.ಸಿದ್ಧಲಿಂಗಯ್ಯ, ಬರಗೂರು ರಾಮಚಂದ್ರಪ್ಪ, ಇಂದೂಧರ ಹೊನ್ನಾಪುರ, ಅಗ್ರಹಾರ ಕೃಷ್ಣಮೂರ್ತಿ, ನಲ್ಲೂರು ಪ್ರಸಾದ್, ಬಿ.ಚಂದ್ರೇಗೌಡ, ಎಲ್.ಹನುಂತಯ್ಯ, ಬಿಳಿಗೆರೆ ಕೃಷ್ಣಮೂರ್ತಿ, ರೂಪ ಹಾಸನ, ಮಮತಾ ಸಾಗರ್, ಟಿ.ಪದ್ಮ, ಎಚ್.ಎನ್.ಆರತಿ, ಎಚ್.ಎಲ್.ಪುಷ್ಪ– ಹೀಗೆ ಅಸಂಖ್ಯ ಲೇಖಕರು ಭಾಗವಹಿಸಿದ್ದಾರೆ. ಸಿರಿಗೆರೆ, ಸಾಣೆಹಳ್ಳಿ, ಚುಂಚನಗಿರಿ ಶ್ರೀಗಳು, ಚಂದ್ರಶೇಖರ ಚೌಟ, ನಾಗೇಶಹೆಗ್ಡೆ, ಸಿ.ಆರ್. ಚಂದ್ರಶೇಖರ್, ಅಶೋಕ ಪೈ ಮುಂತಾದವರೂ ಬಂದು ಹೋಗಿದ್ದಾರೆ. ರಾಜೇಂದ್ರಸಿಂಗರಂತಹ ನೀರಾವರಿ ತಜ್ಞರು, ಸ್ಕಾರ್ಲೆಟ್ ಎಫ್‌ಸ್ಟೀನ್ ಎಂಬ ಯಹೂದಿ ಮಹಿಳೆ– ಇಲ್ಲಿನ ಜನರಿಗೆ ಮಾರ್ಗದರ್ಶನ ಮಾಡಿದ್ದಾರೆ.

ಅಭಿವ್ಯಕ್ತಿ ಇಲ್ಲಿಯವರೆಗೆ ಐವತ್ತಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದೆ. ನಾಗತಿಹಳ್ಳಿ ಗ್ರಾಮದ ಸರ್ಕಾರಿ ಶಾಲಾವರಣದಲ್ಲಿ ರಂಗಮಂದಿರ, ಗ್ರಂಥಾಲಯ, ಕಂಪ್ಯೂಟರ್ ಕೇಂದ್ರಗಳನ್ನು ತನ್ನ ಸ್ವಂತ ಹಣದಿಂದ ನಿರ್ಮಿಸಿ ಸರ್ಕಾರಕ್ಕೆ ಕೊಡುಗೆಯಾಗಿ ಕೊಟ್ಟಿದೆ. ಸರ್ಕಾರಿ ಪ್ರಾಥಮಿಕ ಶಾಲೆಗೆ ವಿನೂತನ ಎನ್ನಬಹುದಾದ ಪರಿಸರಸ್ನೇಹಿ ಕಟ್ಟಡ ನಿರ್ಮಿಸಿದೆ. ಆರ್.ನಾಗೇಶ್, ಮಂಡ್ಯ ರಮೇಶ್, ಜೀವನರಾಮ್ ಸುಳ್ಯ, ಬಸವಲಿಂಗಯ್ಯ, ಮಾಲತೇಶ ಬಡಿಗೇರ ಮುಂತಾದ ರಂಗ ನಿರ್ದೇಶಕರ ನಾಟಕಗಳು ಪ್ರದರ್ಶನ ಕಂಡಿವೆ. ಹಳ್ಳಿಗರಿಗೆ ಕಂಪ್ಯೂಟರ್ ತರಬೇತಿ, ಇಂಗ್ಲಿಷ್ ಮಾತನಾಡುವ ತರಬೇತಿ, ವೈದ್ಯಕೀಯ ತರಬೇತಿ ಶಿಬಿರಗಳನ್ನು ಅಲ್ಲದೆ ಮಕ್ಕಳಿಗೆ ತರಬೇತಿ ಶಿಬಿರಗಳನ್ನೂ ಆಯೋಜಿಸಿದೆ.

ನಾಗತಿಹಳ್ಳಿಯ ರೈತರನ್ನು, ರೈತ ಮಹಿಳೆಯರನ್ನು ಕರ್ನಾಟಕ, ಗೋವಾ, ತಮಿಳುನಾಡು, ಕೇರಳ, ಮಹಾರಾಷ್ಟ್ರ, ದೆಹಲಿ, ಪಂಜಾಬ್ ಪ್ರಾಂತಗಳ ಕೃಷಿ ಚಟುವಟಿಕೆಗಳ ಅಧ್ಯಯನ ಪ್ರವಾಸಕ್ಕೂ ಅಭಿವ್ಯಕ್ತಿ ಕರೆದೊಯ್ದಿದೆ. ಈ ಪ್ರವಾಸಗಳಿಂದಾಗಿ ನಾಗತಿಹಳ್ಳಿಯ ರೈತರು ನವೀನ ಬಗೆಯ ಕೃಷಿ ವಿಧಾನಗಳನ್ನು ತಿಳಿದುಕೊಂಡಿದ್ದಾರೆ. ತಮ್ಮದೇ ಆದ ಸಹಕಾರಿ ಬ್ಯಾಂಕ್, ಹಾಲು ಉತ್ಪಾದಕ ಕೇಂದ್ರಗಳನ್ನು ಕಟ್ಟಿಕೊಳ್ಳುತ್ತಿದ್ದಾರೆ. ಹಡಗು, ವಿಮಾನ ಯಾನದ ಅನುಭವ ಪಡೆದಿದ್ದಾರೆ. ಮಹಿಳೆಯರು ಛಾಯಾ ಭಾರ್ಗವಿ ನಿರ್ದೇಶನದಲ್ಲಿ 'ಕರಿಭಂಟ' ನಾಟಕ ಕಲಿತು ದೇಶದ ಉದ್ದಗಲಕ್ಕೂ ಪ್ರದರ್ಶನ ನೀಡಿದ್ದಾರೆ. ಇವರೆಲ್ಲ ಬಹುತೇಕ ಅನಕ್ಷರಸ್ಥ ಹೆಂಗಸರು, ಕೃಷಿ ದುಡಿಮೆಗಾರರು. ಇವರ ಪ್ರತಿಭೆ ನಿಜಕ್ಕೂ ಅನನ್ಯ. ಅಭಿವ್ಯಕ್ತಿಯ ಕಾರಣದಿಂದಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮುಖ್ಯಮಂತ್ರಿ ಚಂದ್ರು ನೆರವಿನಿಂದ ರಾಜ್ಯಕ್ಕೆ ಪ್ರಥಮ ಎನ್ನಬಹುದಾದ ಗ್ರಾಮೀಣ ಕನ್ನಡ ಭವನ ನಿರ್ಮಾಣವಾಗುತ್ತಿದೆ.



ಕಾರಂತ, ಅಮೂರ ಅವರ ಜತೆಗೆ

ಹಳ್ಳಿಯ ಪರಿಸರದಲ್ಲಿ ಏರ್ಪಾಡಾಗುತ್ತಿರುವ ಕಾರ್ಯಕ್ರಮಗಳನ್ನು ತಮ್ಮ ಕಣ್ಣಿಗೆ ತುಂಬಿಕೊಂಡು ಸ್ಫೂರ್ತಿ ಪಡೆದ ಸುತ್ತಮುತ್ತಲ ಪ್ರಜ್ಞಾವಂತರು ಇವುಗಳನ್ನು ತಮ್ಮ ಹಳ್ಳಿಗಳಿಗೂ ವಿಸ್ತರಿಸುತ್ತಿದ್ದಾರೆ. ಬಿದರಕೆರೆ, ಹೆರಗನಹಳ್ಳಿ, ಸಬ್ಬನಕುಪ್ಪೆ, ಸೊಂದಲಗೆರೆ ಗ್ರಾಮಗಳಲ್ಲಿ ಅಭಿವ್ಯಕ್ತಿ ಪ್ರೇರಣೆಯಿಂದ ಸಾಂಸ್ಕೃತಿಕ ಕೇಂದ್ರಗಳು ನಿರ್ಮಾಣವಾಗುತ್ತಿವೆ. ನಾಗತಿಹಳ್ಳಿಯ ಗ್ರಂಥ ಭಂಡಾರದಲ್ಲಿರುವ ಪುಸ್ತಕಗಳನ್ನು ಓದಿ ಮೂವರು ಲೇಖಕರಾಗಿದ್ದಾರೆ. ಪುಷ್ಪ ನಾಗತಿಹಳ್ಳಿ, ನಾರೈತ, ಜಗದಾಂಬ– ಈ ಮೂವರು ತಾವೇ ಸ್ವತಃ ಪುಸ್ತಕಗಳನ್ನು ಬರೆದು ಪ್ರಶಸ್ತಿಗಳನ್ನೂ ಪಡೆದುಕೊಂಡಿದ್ದಾರೆ. ಈ ವೇದಿಕೆಯ ಅಡಿಯಲ್ಲಿ ನೂರಾರು ಅಂತರ್ಜಾತಿ ಹಾಗೂ ಸರಳ ಮದುವೆಗಳನ್ನು ಮಾಡಲಾಗಿದೆ.

ಒಂದು ಸಾಂಸ್ಕೃತಿಕ ಸಂಘಟನೆ ಈ ಕಾಲದಲ್ಲಿ ಇದಕ್ಕಿಂತ ಹೆಚ್ಚಿನದೇನನ್ನು ಮಾಡಲು ಸಾಧ್ಯ? 'ಅಭಿವ್ಯಕ್ತಿ'ಗೆ ಆರ್ಥಿಕ, ಬೌದ್ಧಿಕ, ಸಾಂಘಿಕ ಸಂಪನ್ಮೂಲಗಳನ್ನು ತುಂಬಿ ಮುನ್ನಡೆಸುತ್ತಿರುವ ನಾಗತಿಹಳ್ಳಿ ಚಂದ್ರಶೇಖರ ನಿಜಕ್ಕೂ ದೊಡ್ಡ ಕನಸುಗಾರ. ಕನ್ನಡಿಗರ ಮನಸ್ಸನ್ನು ವಶೀಕರಣ ಮಾಡಿಕೊಂಡು ಕೋಟ್ಯಂತರ ರೂಪಾಯಿ ಸಂಪಾದಿಸುತ್ತಿರುವ ಐಷಾರಾಮಿ ಮನಸ್ಸಿನ ಸಿನಿಮಾ ಮಂದಿಗೆ ಈ 'ಅಭಿವ್ಯಕ್ತಿ' ಒಂದು ಆದರ್ಶವೇ ಸರಿ. ■